ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಕರ್ನಾಟಕ ಕೃಷಿ ಇಲಾಖೆ

ಸಮಗ್ರ ಕೃಷಿ ಹವಾಮಾನ ವಿಭಾಗ

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–೬೫

ಯಡಿಯೂರು ಹೋಬಳಿಯಲ್ಲಿ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: 21.06.2013

ಈ ವಾರದ ಮುನ್ಸೂಚನೆ (ದಿನಾಂಕ 22-06-13 to 26.06.13 ವರೆಗೆ)

ನಿಯತಾಂಕಗಳು	22.06.13	23.06.13	24.06.13	2506.13	26.06.13
ಮಳೆ (ಮಿ ಮಿ)	3	3	2	3	2
ಗರಿಷ್ಠ ಉಷ್ಣಾಂಶ(ಡಿ.ಸೆ.)	30	28	26	23	24
ಕನಿಷ್ಠ ಉಷ್ಣಾಂಶ (ಡಿ.ಸೆ.)	22	23	22	23	22
ಮೋಡ (ಪ್ರಮಾಣ)	6	5	6	6	5
ಅರ್ದ್ರತೆ ೭.೨೦ ಬೆ (ಶೇ)	87	85	88	91	92
ಅರ್ದ್ರತೆ ೨.೨೦ ಮ (ಶೇ)	59	52	62	70	67
ಗಾಳಿಯ ವೇಗ (ಕಿ.ಮಿ/ಗಂಟೆಗೆ)	7	8	8	9	8
ಗಾಳಿಯ ದಿಕ್ಕು (ಡಿಗ್ರಿ)	260	260	250	230	240

ಈ ವಾರದ ಮುನ್ಸೂಚನೆಯ ಪ್ರಕಾರ ಮುಂದಿನ ಐದು ದಿನಗಳ ಸಮೀಕ್ಷೆಯ ಪ್ರಕಾರ ಎಲ್ಲಾ ಐದು ದಿನಗಳಲ್ಲೂ ಭಾಗಶಃ ಮೋಡ ಕವಿದ ವಾತಾವರಣದಿಂದ ಕೂಡಿದ್ದು, ಸಂಜೆಯ ಅಥವಾ ರಾತ್ರಿಯ ವೇಳೆ ತುಂತುರು ಮಳೆಯಾಗುವ ಸಾಧ್ಯತೆ ಇದೆ. ದಿನದ ಗರಿಷ್ಠ ಉಷ್ಣಾಂಶ 23.0-30.0^{o}C ಮತ್ತು ಕನಿಷ್ಠ 22-23°C ಇರಲಿದೆ. ಬೆಳಿಗಿನ ಅರ್ದ್ರತೆ ಪ್ರಮಾಣ ಶೇ 85-92% ಇದ್ದು ಮಧ್ಯಾಹ್ನ 52-70 % ಇರುವುದು ಮತ್ತು ಗಾಳಿಯು ನೈರುತ್ಯ ದಿಕ್ಕಿನಿಂದ ಗಂಟೆಗೆ ಸರಾಸರಿ 7-8 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

ಸಾಮಾನ್ಯ ಸೂಚನೆಗಳು:

- ಹೀಗಾಗಲೆ ಕೆಲವು ಭಾಗಗಳಲ್ಲಿ ಮುಂಗಾರು ಮಳೆ ಉತ್ತಮವಾಗಿ ಪ್ರಾರಂಭವಾಗುವುದರಿಂದ ಬಿತ್ತನೆ ಬೀಜಗಳನ್ನು ಹತ್ತಿರದ ಕೃಷಿಕೇಂದ್ರಗಳಿಂದ ಪಡೆದು ಹಾಗು ತಮ್ಮಲ್ಲಿ ಇರುವ ಬಿತ್ತನೆ ಬೀಜಗಳನ್ನು ಮೊಳಕೆ ಪರೀಕ್ಷೆ ಪರೀಕ್ ಮಾಡಿಸಿ.
- ಬಿತ್ತನೆಗೆ ಮೊದಲು ಸಾವಯವ ಗೊಬ್ಬರವನ್ನು ಭೂಮಿಗೆ ಸೇರಿಸುವುದು ಹಾಗು ಭೂಮಿಯನ್ನು ಮಟ್ಟಮಾಡಿ ಬಿತ್ತನೆಗೆ ಹದಮಾಡಿಕೊಳ್ಳುವುದು.
- ಖುಷ್ಕಿ ಜಮೀನಿನಲ್ಲಿ ಬದು ಮತ್ತು ಬಸಿಗಾಲುವೆಗಳನ್ನು ಸ್ವಚ್ಛ ಮಾಡುವುದು ಹಾಗು ಕೃಷಿ ಹೊಂಡಗಳನ್ನು ದುರಸ್ತಿಗೊಳಿಸಿ ನೀರು ನಿಧಾನವಾಗಿ ಹರಿಯುವಂತೆ ಮಾಡುವುದು ಮಣ್ಣಿನ ಸವಕಳಿ ತಪ್ಪಿಸಿ ಹಾಗು ಮಣ್ಣಿನ ಸಂರಕ್ಷಣೆ ಮಾಡುವ್ಯದು.

ಕಾಲ ಕಾಲಕ್ಕೆ ಬೇವಿನ ಹಿಂಡಿ ಹಾಗೂ ಹೊಂಗೆ ಹಿಂಡಿಯನ್ನು ಭೂಮಿಗೆ ಸೇರಿಸುವುದರಿಂದ ಹಲವು ಬೆಳೆಗಳಿಗೆ ಮಾರಕವಾಗುವ ಜಂತು ಹುಳುಗಳ ಭಾದೆಯನ್ನು ತಡೆಗಟ್ಟಬಹುದು.

-

ತೊಗರಿ:

- **ತೊಗರಿ:** ತೊಗರಿ ತಳಿಗಳಾದ TTB-7, BRG-1, BRG-2 ವಿಶ್ವವಿದ್ಯಾನಿಲಯದ ಆವರಣದಲ್ಲಿ/ ಕೃಷಿ ಇಲಾಖೆಯಲ್ಲಿ ದೊರೆಯುತ್ತಿದ್ದು, ರೈತರು ಇವನ್ನು ಪಡೆದು ಬಿತ್ತನೆ ಮಾಡಿ ಅಧಿಕ ಇಳುವರಿ ಪಡೆಯಲು ಸೂಚಿಸಲಾಗಿದೆ. ಒಂದು ಎಕರೆಗೆ 15 ಕಿ.ಗ್ರಾಂ. ಮತ್ತು 60 ಸೆ.ಮೀ. x30 ಸೆ.ಮೀ. ಅಂತರದಲ್ಲಿ ಬಿತ್ತುವುದು ಸೂಕ್ತ. ಬಿತ್ತನೆ ಮಾಡುವುದಕ್ಕಿಂತ ಮುಂಚೆ ಸೂಕ್ತ ಬೀಜೋಪಚಾರ ಮಾಡಿ ಬಿತ್ತನೆ ಮಾಡಿ.

ರಾಗಿ:

This document was created using SmartPDF Creator
To remove this message purchase the product at www.SmartPDFCreator.com

- **ರಾಗಿ** ತಳಿಗಳಾದ Indaf-9 , ML-365, G.P.U-28 & 48, MR-6 ವಿಶ್ವವಿದ್ಯಾನಿಲಯದ ಆವರಣದಲ್ಲಿ/ ಕೃಷಿ ಇಲಾಖೆಯಲ್ಲಿ ದೊರೆಯುತ್ತಿದ್ದು, ರೈತರು ಇವನ್ನು ಪಡೆದು ಬಿತ್ತನೆ ಮಾಡಿ ಅಧಿಕ ಇಳುವರಿ ಪಡೆಯಲು ಸೂಚಿಸಲಾಗಿದೆ ಒಂದು ಎಕರೆಗೆ 5 ಕಿ.ಗ್ರಾಂ. ಮತ್ತು 25 ಸೆ.ಮೀ. x 10 ಸೆ.ಮೀ. ಅಂತರದಲ್ಲಿ ಬಿತ್ತುವುದು ಸೂಕ್ತ.

- **ಬೀಜೋಪಚಾರ:** ದ್ವಿದಳ ಬೆಳೆಗಳನ್ನು ನಾಟಿ ಮಾಡುವ ಮೊದಲು ರೈಜ಼ೊಬಿಯಂ ಜೈವಿಕ ಗೊಬ್ಬರದಿಂದ (೫೦೦ ಗ್ರಾಂ ಪ್ರತಿ ಹೆಕ್ಟೇರಿಗೆ) ಉಪಚರಿಸುವುದರಿಂದ ಸಾರಜನಕದ ಬಳಕೆಯನ್ನು ಕಡಿಮೆ ಮಾಡಬಹುದು.
    - ತೊಟಗಾರಿಕೆ ಬೆಳೆಗಳಲ್ಲಿ ಇಂಗು ಗುಂಡಿಗಳನ್ನು ತೆಗೆದು ನೀರು ಇಂಗುವಂತೆ ಮಾಡುವುದಕ್ಕೆ ಇದು ಸೂಕ್ತ ಕಾಲ ಇದರಿಂದಮಣ್ಣಿನಲ್ಲಿ ತೇವಾಂಶ ಕಾಪಾಡಿಕೊಂಡು ಮಣ್ಣಿನ ಸವಕಳಿ ತಪ್ಪಿಸಿ ಹಾಗು ಮಣ್ಣಿನ ಸಂರಕ್ಷಣೆ ಕಾಪಾಡುತ್ತದೆ
    - ಕಳೆದ ಕೆಲವು ದಿನಗಳಿಂದ ವಾತವರಣದಲ್ಲಿ ಗಾಳಿಯು ಹೆಚ್ಚಾಗಿದ್ದು ಬಾಳೆ ಹಾಗು ಪರಂಗಿ ಗಿಡಗಳು ನೆಲಕ್ಕೆ ಉರುಳಿರುವುದು ಕಂಡು ಬಂದಿರುವುದರಿಂದ ಕವಡು (wooden sticks) ಗಳನ್ನು ಕೊಟ್ಟು ಗಿಡಗಳು ನೆಲಕ್ಕೆ ಬೀಳದಂತೆ ಎಚ್ಚರ ವಹಿಸಿ.

ಸೋರೆ ಕಾಯಿ, ಹೀರೆ ಕಾಯಿ ಗಿಡಗಳಲ್ಲಿ ಬೂದಿ ರೋಗ: ಗಂಧಕ (ಸಲ್ಫರ್) ಅಥವಾ ಕೆಲ್ಟೇನ್ ಅಥವಾ ಬೆನ್ಲೇಟ್ (0.1%) ಅನ್ನು ಸಿಂಪಡಿಸಿ.
ಹೇನು (ಏಫಿಡ್) ಹಾಗೂ ಎಲೆ ಜಿಗಿ ಹುಳುಗಳು ಎಲೆಯ ಕೆಳ ಭಾಗದಲ್ಲಿ ಇದ್ದು ರಸ ಹೀರುವುದರಿಂದ ಎಲೆಗಳು ಮುದುಡುತ್ತವೆ ಆದ್ದರಿಂದ ೪% ಬೇವಿನ ಕಷಾಯ ವನ್ನು ಸಿಂಪಡಿಸಿ ಅಥವಾ ರೋಗಾರ್ ಅಥವಾ ಇಮಿಡಾಕ್ಲೋಪ್ರಿಡ್ ಅಥವಾ ಲ್ಯಾನ್ಸರ್ ಗೋಲ್ಡ್ ಅನ್ನು ಸಿಂಪಡಿಸಿ ಅನ್ನು ಸಿಂಪಡಿಸಿ.
ಕೇದಿಗೆ ರೋಗ (ಡೌನಿ) ಕಂಡುಬಂದಲ್ಲಿ ರಿಡೋಮಿಲ್ (೨ ಗ್ರಾಂ ಪ್ರತಿ ಲೀಟರ್ ನೀರಿಗೆ) ಸಿಂಪಡಿಸಿ.

ಎಲೆ ಕೋಸು ಹಾಗೂ ಹೂ ಕೋಸು:
ಹೇನು (ಏಫಿಡ್): ಎಲೆಯ ಕೆಳ ಭಾಗದಲ್ಲಿ ಇರುತ್ತವೆ. ಎಲೆಗಳ ರಸ ಹೀರುವುದರಿಂದ ಎಲೆಗಳು ಮುದುಡುತ್ತವೆ ಹಾಗೂ ನಂತರ ಒಣಗುತ್ತವೆ. ಇವುಗಳನ್ನು ಹತೋಟಿ ಮಾಡಲು ೪% ಬೇವಿನ ಕಷಾಯವನ್ನು ಸಿಂಪಡಿಸಿ ಅಥವಾ ರೋಗಾರ್ ಅಥವಾ ಇಮಿಡಾಕ್ಲೋಪ್ರಿಡ್ ಅನ್ನು ಸಿಂಪಡಿಸಿ.
ಎಲೆ ತಿನ್ನುವ ಹುಳು (ಡೈಮಂಡ್ ಬ್ಯಾಕ್ ಮಾತ್): ಎಲೆಗಳನ್ನು ಸಂಪೂರ್ಣವಾಗಿ ತಿಂದು ಹಾಕುತ್ತವೆ. ಇವುಗಳನ್ನು ಹತೋಟಿ ಮಾಡಲು ಕ್ವಿನಾಲ್ಫಾಸ್ ಅಥವಾ ಕ್ಲೋರೊಪೈರಿಫಾಸ್ ಅನ್ನು ೨.೫ ಮಿ.ಲೀ. ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸುವುದು ಸೂಕ್ತ.

ಮಾವು: ಹಣ್ಣನ್ನು ಕಟಾವು ಮಾಡುವ ಸಮಯದಲ್ಲಿ ನೆಲಕ್ಕೆ ತಾಗದ ರೀತಿ ಎಚ್ಚರ ವಹಿಸಿ. ಇದರಿಂದ ಕಟಾವಿನ ನಂತರ ಶಿಲೀಂಧ್ರದಿಂದ ಬರುವ ಹಲವಾರು ರೋಗಗಳನ್ನು ತಡೆಯಬಹುದು.

ಜಾನುವಾರುಗಳ ನಿರ್ವಹಣೆ:

- ಜಾನುವಾರುಗಳಿಗೆ ಕಾಲು ಬಾಯಿ ಜ್ವರ ಬರುವ ಸಾಧ್ಯತೆ ಇರುವುದರಿಂದ ಲಸಿಕೆಯನ್ನು ಹಾಕಿಸಿ.
- ರೇಷ್ಮೆ ಹಾಗೂ ಕೋಳಿ ಸಾಕಣೆಯ ಕೊಠಡಿಯ ಉಷ್ಣಾಂಶದ ಸ್ಥಿರತೆಯನ್ನು ಕಾಪಾಡಿಕೊಳ್ಳುವುದು.

ನೋಡಲ್ ಅಧಿಕಾರಿ:
ಡಾ.ಎಮ್.ಬಿ. ರಾಜೇಗೌಡ
ಬೆಂಗಳೂರು.

This document was created using a Smart PDF Creator
To remove this message purchase the product at www.SmartPDFCreator.com